ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು
ದಿನಾಂಕ: 08-12-2022

ಸಂಖ್ಯೆ:ಜಿಎಲ್13/137/2022-23

**ಸುತ್ತೋಲೆ**

ವಿಷಯ: ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದಲ್ಲಿನ ಸಾರ್ವಜನಿಕ ವಿಶ್ವವಿದ್ಯಾನಿಲಯಗಳು ಉತ್ತಮ ಹಾಗೂ ಪಾರದರ್ಶಕ ಆಡಳಿತವನ್ನು ರೂಪಿಸಲು ಕೂಡಲೇ ಕಡ್ಡಾಯವಾಗಿ ಜಾರಿಗೆ ತರಬೇಕಾಗಿರುವ ಕ್ರಮಗಳ ಕುರಿತು.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ಇಡಿ/387/ಯುಆರ್‌ಸಿ/2022
ಬೆಂಗಳೂರು, ದಿನಾಂಕ: 01.12.2022.

-:-

ಮೇಲಿನ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದಲ್ಲಿ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆಯನ್ನು ತರಲು, ಹಲವಾರು ಸುಧಾರಣೆಗಳನ್ನು ಸಂದರ್ಭಾನುಸಾರವಾಗಿ ಪಾರದರ್ಶಕ ಆಡಳಿತವನ್ನು ರೂಪಿಸುವ ನಿಟ್ಟಿನಲ್ಲಿ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಕಾಲಕಾಲಕ್ಕೆ ಸುಧಾರಣೆಗಳನ್ನು ತರಲಾಗುತ್ತಿದೆ. ವಿಶ್ವವಿದ್ಯಾನಿಲಯಗಳಲ್ಲಿ ಆಡಳಿತ ಶಿಸ್ತು ತರಲು, ಪಾರದರ್ಶಕತೆ ವ್ಯವಸ್ಥೆ ನಿರ್ಮಾಣ ಮಾಡಲು ಮತ್ತು ಹಿತಾಸಕ್ತಿ ಸಂಘರ್ಷ ತಪ್ಪಿಸಲು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದಲ್ಲಿನ ಸಾರ್ವಜನಿಕ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದಂತೆ ಸುಧಾರಣಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇನ್ನೂ ಪರಿಣಾಮಕಾರಿಯಾಗಿ ವಿಶ್ವವಿದ್ಯಾನಿಲಯಗಳು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವುದು ಅತ್ಯಂತ ಮುಖ್ಯವಾಗಿರುತ್ತದೆಂಬ ನಿಟ್ಟಿನಲ್ಲಿ ಸುವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಡಿಸೆಂಬರ್ ಮಾಸವನ್ನು **"ಸುಶಾಸನ ಮಾಸ"** (Good Governance Month) ಎಂದು ಆಚರಿಸಿ, ಸದರಿ ಆದೇಶದಲ್ಲಿ ಉಲ್ಲೇಖಿಸಿರುವ ಅಂಶಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಅಳವಡಿಸುವ ಸಲುವಾಗಿ, ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರುಗಳು/ಅಧಿಕಾರಿಗಳು ಮತ್ತು ಅಧ್ಯಾಪಕ ವೃಂದದವರು ಮಾಹಿತಿಯನ್ನು ಅತೀ ಶೀಘ್ರವಾಗಿ ಸಂಯೋಜಕರು, ಇನ್‌ಫರ್‌ಮೇಷನ್ ಕಮ್ಯುನಿಕೇಷನ್ ಡಿವಿಜನ್ (ಐ.ಸಿ.ಡಿ), ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು, ಇವರಿಗೆ ನೀಡತಕ್ಕದ್ದು.

ಪ್ರ. ತಿ. ನೋ...

ಮುಂದುವರೆದು, ಸಂಯೋಜಕರು (ಐ.ಸಿ.ಡಿ), ಇವರು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ತಿಳಿಸಿರುವ ಎಲ್ಲಾ ಮಾಹಿತಿಯನ್ನೂ ವ್ಯವಸ್ಥಿತವಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಅತೀ ಜರೂರಾಗಿ ಅಳವಡಿಸಿ, ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಇವರಿಗೆ ವರದಿ ಸಲ್ಲಿಸುವುದು. ಉಲ್ಲೇಖಿತ ಸರ್ಕಾರದ ಆದೇಶವನ್ನು ಈ ಸುತ್ತೋಲೆಯೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ.

8/12

ಕುಲಸಚಿವ

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಇವರಿಗೆ:

1. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು/ಕೇಂದ್ರಗಳು/ಸಂಸ್ಥೆಗಳು
2. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಎಸ್ಟೇಟ್ ಆಫೀಸರ್, ಮೈ.ವಿ.ವಿ. ಮೈಸೂರು
6. ನಿರ್ದೇಶಕರು, ಪಿಎಂಇಬಿ/ಸಿಡಿಸಿ/ಮುದ್ರಣಾಲಯ/ಪ್ರಸಾರಾಂಗ/ವಿದ್ಯಾರ್ಥಿ ಕ್ಷೇಮ ಪಾಲನಾ/ ದೂರ ಶಿಕ್ಷಣ ಕೇಂದ್ರ,/ಐ.ಕ್ಯೂ.ಎ.ಸಿ.
7. ಸಂಯೋಜಕರು, ಐಸಿಡಿ, (ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ. ಮೈಸೂರು
8. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು
9. ಗ್ರಂಥಪಾಲಕರು, ವಿ.ವಿ. ಗ್ರಂಥಾಲಯ (ಸ್ನಾತಕ/ಸ್ನಾತಕೋತ್ತರ), ಮೈ.ವಿವಿ. ಮೈಸೂರು
10. ವಿಶೇಷಾಧಿಕಾರಿಗಳು, ಪ.ಜಾ/ಪ.ವ ವಿಶೇಷ ಘಟಕ, ಮೈ.ವಿ.ವಿ.
11. ಪ್ರಾಂಶುಪಾಲರು, ಮಹಾರಾಜ/ಯುವರಾಜ/ವಿಶ್ವವಿದ್ಯಾನಿಲಯ ಸಂಜೆ ಕಾಲೇಜು/ ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಮೈಸೂರು.
12. ಸಂಯೋಜನಾಧಿಕಾರಿಗಳು, ಎನ್.ಎಸ್.ಎಸ್. ಘಟಕ/ ಹಿಂದುಳಿದ ವರ್ಗಗಳ ಘಟಕ/ ಕೆರಿಯರ್ ಹಬ್, ಮೈ.ವಿ.ವಿ.
13. ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು, ಆಡಳಿತ/ಪರೀಕ್ಷಾ/ಹಣಕಾಸು ಶಾಖೆ, ಮೈವಿವಿ,ಮೈಸೂರು.
14. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
15. ಕಛೇರಿ ಪ್ರತಿ.

ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು
ದಿನಾಂಕ: 08-12-2022

ಸಂಖ್ಯೆ:ಜಿಎಲ್13/137/2022-23

ಎಲ್ಲಾ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ನಿರ್ದೇಶಕರು,
ಮುಖ್ಯಸ್ಥರು/ಸಂಯೋಜಕರು

ವಿಷಯ: ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದಲ್ಲಿನ ಸಾರ್ವಜನಿಕ ವಿಶ್ವವಿದ್ಯಾನಿಲಯಗಳು ಉತ್ತಮ ಹಾಗೂ ಪಾರದರ್ಶಕ ಆಡಳಿತವನ್ನು ರೂಪಿಸಲು ಕೂಡಲೇ ಕಡ್ಡಾಯವಾಗಿ ಜಾರಿಗೆ ತರಬೇಕಾಗಿರುವ ಕ್ರಮಗಳ ಕುರಿತು.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ಇಡಿ/387/ಯುಆರ್‌ಸಿ/2022
ಬೆಂಗಳೂರು, ದಿನಾಂಕ: 01.12.2022.

-:-

ಡಿಸೆಂಬರ್ ಮಾಸವನ್ನು **"ಸುಶಾಸನ ಮಾಸ"** (Good Governance Month) ಎಂದು ಆಚರಿಸಿ, ಸದರಿ ಆದೇಶದಲ್ಲಿ ಉಲ್ಲೇಖಿಸಿರುವ ಅಂಶಗಳನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸುವ ಸಂಬಂಧ, ತಮ್ಮ ವಿಭಾಗಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶ (ಪ್ರತಿ ಲಗತ್ತಿಸಿದೆ)ದಲ್ಲಿ ನಮೂದಿಸಿರುವ ಈ ಕೆಳಕಂಡ ಅಂಶಗಳನ್ನು ಈ ಪತ್ರ [illegible] 3 ದಿವಸಗಳ ಒಳಗಾಗಿ ಅನುಸ್ಠಾನಗೊಳಿಸಲು ತುರ್ತಾಗಿ ಕ್ರಮ ವಹಿಸಬೇಕಾಗಿ ಕೋರಿದೆ.

1. ವಿಶ್ವವಿದ್ಯಾಲಯದ ಎಲ್ಲಾ ಸ್ಥಿರಾಸ್ತಿಗಳ ಚರಾಸ್ತಿಗಳ ಅಧ್ಯಯನ ವಿಭಾಗವಾರು ವಿವರಗಳು. (ಆದೇಶದಲ್ಲಿನ ಭಾಗ 01 ಕ್ರಮ. ಸಂ.6)
2. ವಿಶ್ವವಿದ್ಯಾಲಯದ ಎಲ್ಲಾ ಬ್ಯಾಂಕ್ ಖಾತೆಗಳ ವಿವರಗಳು, ಬ್ಯಾಂಕ್ ಖಾತೆಗಳ ಆರಂಭ ಮತ್ತು ನಿರ್ವಹಣೆಯ ಉದ್ದೇಶಗಳು ಹಾಗೂ ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿರುವ ಬಾಂಕ್ ಬ್ಯಾಲೆನ್ಸ್ ಹಾಗೂ ಠೇವಣಿಗಳ ಬಗ್ಗೆ ವಿವರಗಳು. ಜಾಲತಾಣದಲ್ಲಿ ಪ್ರಕಟಿಸಲಾಗುವ ಈ ಮಾಹಿತಿಯನ್ನು ಕಡ್ಡಾಯವಾಗಿ ಪ್ರತಿ ತಿಂಗಳು ನವೀಕರಿಸತಕ್ಕದ್ದು. (ಆದೇಶದಲ್ಲಿನ ಭಾಗ 01 ಕ್ರಮ. ಸಂ.07)
3. ವಿಶ್ವವಿದ್ಯಾಲಯಕ್ಕೆ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸರ್ಕಾರೇತರ ಮೂಲಗಳಿಂದ ಮಂಜೂರಾಗಿರುವ ಸಂದಾಯವಾಗಿರುವ ಸಂಪನ್ಮೂಲಗಳ ವಿವರಗಳು (Including all forms of own source Revenue) ಅದರ ಜಮಾ, ಖರ್ಚು ಹಾಗೂ ಠೇವಣಿಸಿದ ಬ್ಯಾಂಕ್ ಖಾತೆಯ ವಿವರಗಳು. (ಆದೇಶದಲ್ಲಿನ ಭಾಗ 01 ಕ್ರಮ. ಸಂ.08)
4. 2022-23ನೇ ಸಾಲಿನಲ್ಲಿ ಪ್ರಕಟಿಸಲಾಗಿರುವ ಟೆಂಡರ್‌ಗಳು Technical ಮತ್ತು Financial bid ನಡವಳಿಗಳು. ಖರೀದಿಗಳ ಆದೇಶಗಳು, ಕೈಗೊಳ್ಳಲಾದ ಸಂಗ್ರಹಣೆಗಳ ಸಂಪೂರ್ಣ ವಿವರ ಹಾಗೂ ಅನ್ವಯಿಸುವ ಸಂಗ್ರಹಣೆಗಳಿಗೆ ಸಂಬಂಧಪಟ್ಟ Stock book register extract. (ಆದೇಶದಲ್ಲಿನ ಭಾಗ 01 ಕ್ರಮ. ಸಂ.14)
5. ಸ್ಥಾಪನೆ ವರ್ಷ ಹಾಗೂ ಮೂಲ ಉದ್ದೇಶಗಳ ಮಾಹಿತಿಯೊಂದಿಗೆ ವಿಶ್ವವಿದ್ಯಾಲಯ ಅಧ್ಯಯನ ವಿಭಾಗ, ಅಧ್ಯಯನ ಕೇಂದ್ರ, ಅಧ್ಯಯನ ಪೀಠಗಳ ವಿವರಗಳು ಅಧ್ಯಯನ ವಿಭಾಗಗಳಲ್ಲಿ

ನಡೆಸಲಾಗುತ್ತಿರುವ ಶೈಕ್ಷಣಿಕ ಕಾರ್ಯಕ್ರಮಗಳು ಕೋರ್ಸುಗಳು, Detail of accreditation etc., ಬೋಧಕ ಸಿಬ್ಬಂದಿಯ curriculum vitae ಹಾಗೂ ಅವರ ಆಸಕ್ತಿಗಳು, ಅವರಿಂದ ಕೈಗೆಳ್ಳಲಾದ ಸಂಶೋಧನೆ, ಅವರ ಪ್ರಕಟಣೆಗಳು, ಸಾಧನೆಗಳು ಮತ್ತು ಅವರ ಸಂಪರ್ಕದ ವಿವರಗಳು; ಇದೇ ರೀತಿಯ ಮಾಹಿತಿಯನ್ನು ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳು ಮತ್ತು ಘಟಕ ಕಾಲೇಜುಗಳು ತಮ್ಮ ವೆಬ್‌ಸೈಟ್‌ಗಳಲ್ಲಿ ಬಹಿರಂಗಪಡಿಸಬೇಕು (ಒಂದು ವೇಳೆ ಘಟಕ ಕಾಲೇಜಿಗೆ ಯಾವುದೇ ವೆಬ್‌ಸೈಟ್ ಇಲ್ಲದಿದ್ದರೆ, ಅದನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿಯೇ ಒಂದು ಟ್ಯಾಬ್ ಅಡಿಯಲ್ಲಿ ಮಾಡಬಹುದು). ಈ ವರ್ಷವು ಸೇರಿದಂತೆಕಳೆದ ಐದು ವರ್ಷಗಳ ಶೈಕ್ಷಣಿಕ ಕಾರ್ಯಕ್ರಮಗಳ ಸೆಮಿಸ್ಟರ್‌ವಾರು ಫಲಿತಾಂಶಗಳ ವಿವರಗಳು. (ಆದೇಶದಲ್ಲಿನ ಭಾಗ 01 ಕ್ರಮ. ಸಂ.16)

6. ಪ್ರತಿ ವಿಶ್ವವಿದ್ಯಾಲಯವು ತನ್ನ ಅಗ್ರ 05 ಅತಿ ಹೆಚ್ಚು ದಾಖಲಾತಿಯನ್ನು ಹೊಂದಿದ ಕೋರ್ಸ್‌ಗಳಿಗೆ ( to five highest enrollment courses) ಡಿಸೆಂಬರ್‌ನಲ್ಲಿ ಔಟ್‌ರೀಚ್ ಕಾರ್ಯಕ್ರಮಗಳನ್ನು ಆಯೋಜಿಸತಕ್ಕದ್ದು. ಹಾಗೂ ಅದರವಿದ್ಯಾರ್ಥಿಗಳಿಗೆಇಂಟರ್‌ಶಿಪ್/ಸಂಶೋಧನೆ/ಉದ್ಯಮಶೀಲತೆ/ ಉದ್ಯೋಗಕ್ಕಾಗಿ ಒಡಂಬಡಿಕೆ ( Mou) ಗಳನ್ನು ಮಾಡಿಕೊಳ್ಳಲು ಉದ್ಯಮ ಸಂಸ್ಥೆಗಳು ಮತ್ತು ಸ್ಥಳೀಯ ಕೈಗಾರಿಕೆಗಳೊಂದಿಗೆ ಒಂದು ದಿನದ ಕಾರ್ಯಗಾರವನ್ನು ಹಮ್ಮಿಕೊಳ್ಳತಕ್ಕದ್ದು. ಈ ಮುಂದಿನ ಮೂರು ತಿಂಗಳಲ್ಲಿ ವಿಶ್ವವಿದ್ಯಾಲಯಗಳು ಅಂತಹ ಕನಿಷ್ಠ ಐದು ಉದ್ಯಮ ಸಂಸ್ಥೆಗಳು/ಕೈಗಾರಿಕೆಗಳೊಂದಿಗೆ ಒಡಂಬಡಿಕೆ (Mou ) ಗಳನ್ನು ಮಾಡಿಕೊಳ್ಳತಕ್ಕದ್ದು. ಎಲ್ಲಾ ಒಡಂಬಡಿಕೆ (Mou) ಗಳು ಸಾರ್ವಜನಿಕರಿಗೆ ಲಭ್ಯವಿರುವಂತೆ ವಿಶ್ವವಿದ್ಯಾಲಯದ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸತಕ್ಕದ್ದು. ಇದಲ್ಲದೆ ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಒಡಂಬಡಿಕೆ (Mou ) ಗಳನ್ನು ಫಲಿತಾಂಶಕ್ಕಾಗಿ ಪುನರ್ ಪರಿಶೀಲಿಸುವುದು ಹಾಗೂ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮತೆಗೆದುಕೊಳ್ಳುವುದು. ಮಾರ್ಚ್ 2023 ರ ವೇಳೆಗೆ ವಿದ್ಯಾರ್ಥಿಗಳ ಉದ್ಯೋಗಾವಕಾಶವನ್ನು ಹೆಚ್ಚಿಸಲು ಅಗ್ರ ಐದು ಅತಿ ಹೆಚ್ಚು ದಾಖಲಾತಿ ಕಾರ್ಯಕ್ರಮಗಳಿಗೆ (top five highest enrolment courses in the university) ಉದ್ಯಮ ಸಂವಾದದ ಆಧಾರದ ಮೇಲೆ ಪಠ್ಯಕ್ರಮದ ಪರಿಷ್ಕರಣೆಯನ್ನು ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು. (ಆದೇಶದಲ್ಲಿನ ಭಾಗ 02 ಕ್ರಮ. ಸಂ.e)

7. ಪ್ರತಿ ವಿಶ್ವವಿದ್ಯಾಲಯವು ತನ್ನ ಅಲ್ಪಾವಧಿ, ಮಧ್ಯಮಾವಧಿ ಮತ್ತು ಧೀರ್ಘಾವಧಿ ಗುರಿಗಳನ್ನು ಗುರುತಿಸಿ ಸಾಧಿಸಲು ಯುಜಿಸಿ ನೀಡಿರುವ ಮಾರ್ಗಸೂಚಿಗಳ ಪ್ರಕಾರ Institution Department Plan (IDP) ಅನ್ನು ಚರ್ಚೆ ಹಾಗೂ ಸಂವಾದದ ಮೂಲಕ ತಯಾರು ಮಾಡಲು ಡಿಸೆಂಬರ್ ಮಾಹೆಯಲ್ಲಿ ಕಾರ್ಯ ಪ್ರಾರಂಭ ಮಾಡಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಒಂದು ತಿಂಗಳೊಳಗೆ ಪ್ರಕಟಿಸುವುದು. ಉನ್ನತ ಶಿಕ್ಷಣ ಪರಿಷತ್ ಅಗತ್ಯ ನೆರವು ಮತ್ತು ಮಾರ್ಗದರ್ಶನ ನೀಡುವುದು. (ಆದೇಶದಲ್ಲಿನ ಭಾಗ 02 ಕ್ರಮ. ಸಂ. j)

ಹಾಗೂ ಸದರಿ ಆದೇಶದಲ್ಲಿ ಅನ್ವಯಿಸತಕ್ಕ ಇತರೆ ಅಂಶಗಳು.

ಕುಲಸಚಿವರು
ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು